ದಿನಾಂಕ :13-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ಪ್ರಸ್ತುತ ನಾನು  ಶಿರಾ ತಾಲ್ಲೂಕಿನಲ್ಲಿ ವಾಸಿಸುತ್ತಿದ್ದೇನೆ . ಗುಬ್ಬಿ ತಾಲ್ಲೂಕಿನ ಕೋಣನಕಲ್ಲು ಗ್ರಾಮವನ್ನು ಬಿಟ್ಟು ಸುಮಾರು 2-3 ವರ್ಷಗಳಾಗಿವೆ . ಕೋಣನಕಲ್ಲು ಗ್ರಾಮದಲ್ಲಿ ನಾನು ವಾಸಿಸುತ್ತಿದ್ದೆ ಎಂದು ತೋರಿಸುವ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ . ನನ್ನ ವಾಸಸ್ಥಳವನ್ನು  ತೋರಿಸುವ ದಾಖಲೆಗಳು ವಿಜಯಪುರಕ್ಕೆ ಸೇರಿದ್ದಾಗಿದೆ . ನಾನು ಕೋಣನಕಲ್ಲು ಗ್ರಾಮವನ್ನು ಬಿಟ್ಟು ಸಮಾರು 25-30 ವರ್ಷಗಳ ಹಿಂದೆಯೇ ವಿಜಯಪುರಕ್ಕೆ ವಾಸಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ.  ನನ್ನ ತಾಯಿಯ ಜೀವಿತಾವಧಿಯಲ್ಲಿ ನಾನು ಎಂದೂ ಸಹಾ ಕೋಣನಕಲ್ಲು ಗ್ರಾಮಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಾಯಿಯ ಯೋಗಕ್ಷೇಮವನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಅವರ ಪೋಷಕರಿಗೆ ಒಬ್ಬಳೇ ಮಗಳು ಎಂದರೆ ಸರಿ .  ನನ್ನ ತಾಯಿಯ ಪೋಷಕರ ಮರಣಾ ನಂತರ ಆಕೇ ಒಬ್ಬಳೇ ಮಗಳಾಗಿರುವ ಕಾರಣ ದಾವಾ ಷೆಡ್ಯೂಲ್  1 ಮತ್ತು 2 ನೇ ಸ್ವತ್ತು ಪೌತಿ ಖಾತೆಯ ಮೂಲಕ ಬಂದಿವೆ ಎಂದರೆ ಸರಿ . 1 ನೇ ಪ್ರತಿವಾದಿಯು ನಾಗರಾಜು ಎಂಬುವವರನ್ನು ವಿವಾಹ ವಾಗಿದ್ದಾರೆ ಎಂದರೆ ಸರಿ . ನಾಗರಾಜು ಮತ್ತು 1 ನೇ ಪ್ರತಿವಾದಿ ತನ್ನ ತಾಯಿಯನ್ನು ನೋಡಿಕೊಂಡು  ಅವರೊಡನೆಯೇ ಕೋಣನಕಲ್ಲು ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ, ನಾನು ಕೂಡ ನೋಡಿಕೊಳ್ಳುತ್ತಿದ್ದೆ ಎಂದು ತಿಳಿಸಿದ್ದಾರೆ . 1 ನೇ ಪ್ರತಿವಾದಿಯು ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದ ಕಾರಣ ದಿಃ 30-08-2012 ರಂದು ನನ್ನ  ತಾಯಿ 1 ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್  1 ಮತ್ತು 2 ನೇ ಸ್ವತ್ತಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ವಾದ ಪತ್ರದಲ್ಲಿ ಸದರಿ ವಿಚಾರ ತಿಳಿಸಿದ್ದೇನೆ ಎಂದರೆ ಸರಿಯಲ್ಲ.  1 ನೇ ಪ್ರತಿವಾದಿಯು ದಾನವನ್ನು ಸ್ವೀಕರಿಸಿದ್ದಾರೆ ನನಗೆ ಗೊತ್ತಿಲ್ಲ . ದಾನ ಪತ್ರದ ಆಧಾರದಲ್ಲಿ 1 ನೇ  ಪ್ರತಿವಾದಿಯ ಹೆಸರಿಗೆ ದಾವಾ ಷೆಡ್ಯೂಲ್  1 ಮತ್ತು 2 ನೇ ಸ್ವತ್ತಿನ ಖಾತೆ ಮತ್ತು ಪಹಣಿ ದಾಖಲಾಗಿದೆ ಎಂದರೆ ಸರಿಯಲ್ಲ.  ನಾನು ಸದರಿ ಖಾತೆ ಮತ್ತು ಪಹಣಿಯನ್ನು  ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ನನಗೆ ವಿಚಾರ ಗೊತ್ತಿರಲಿಲ್ಲ ಎಂದು ತಿಳಿಸಿದ್ದಾರೆ . ಮೇಲೆ ಹೇಳಿದ ಎಲ್ಲಾ ವಿಚಾರಗಳೂ ತಿಳಿದಿದ್ದರೂ ಸಹಾ ಸುಳ್ಳು ಸಾಕ್ಷಿ  ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ದಾನ ಪತ್ರದ ದಿನಾಂಕದಿಂದಲೇ 1 ನೇ ಪ್ರತಿವಾದಿಯು ದಾವಾ ಷೆಡ್ಯೂಲ್ 1 ಮತ್ತು 2 ನೇ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ದಾವಾ ಷೆಡ್ಯೂಲ್ 1 ಮತ್ತು 2 ನೇ ಸ್ವತ್ತುಗಳ ಮೇಲೆ ನನಗೆ ಹಕ್ಕು ಅಧಿಕಾರ ಏನು ಇಲ್ಲ ಆದರೂ ಸಹಾ ಈ ದಾವೆ ಸಲ್ಲಿಸಿ 1 ನೇ ಪ್ರತಿವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .